KUNIGAL.

(c) (i) Kothagere, Marconahalli and Amruthur.

(ii) (1) Marconahalli

	P.s.
Amruthur (Combined Estimate)	.. 1,50,364
(2) Kothagere	.. 14,243

(d) Tumkur District—Rs. 9,94,000 for power supply to Irrigation Pump Sets under the Rs. 50 lakhs loan. The amount has not been allotted taluk-war.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಈ ಮೂರು ತಾಲ್ಲೂಕುಗಳಲ್ಲಿ ಯಾವ ಯಾವ ಅಂದಾಜುಗಳನ್ನು ತಾವು ಮಂಜೂರು ಮಾಡಿದ್ದೀರಿ? ಯಾವುದು ಅನುಕೂಲ ವಾತು ಯಾವುದು ಅನಾನುಕೂಲವೆಂದು ಕಂಡುಬಂದಿದೆ?

Sri K. HANUMANTHAIYA.—All the information is given.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ತಾವು ಎಷ್ಟು ಅಂದಾಜುಗಳನ್ನು ಮಂಜೂರು ಮಾಡಿದ್ದೀರಿ. ತಮಗೆ ಬಂದಿರತಕ್ಕ ಅಂದಾಜುಗಳ ಪೈಕಿ ಎಷ್ಟು 'ಫೀಜಿಬಲ್' ಮತ್ತು ಎಷ್ಟು 'ನಾಟ್‌ಫೀಜಿಬಲ್' ಎಂಬುದನ್ನು ತಿಳಿಸಬೇಕೆಂಬುದು ನನ್ನ ಪ್ರಶ್ನೆ.

ಶ್ರೀ ಕೆ. ಹನುಮಂತಯ್ಯ.—ತಾವು ಯಾವ ಪ್ರಶ್ನೆಯ ಮೇಲೆ ಈ ಉಪ ಪ್ರಶ್ನೆ ಹಾಕುತ್ತಿದ್ದೀರಿ?

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಯಾವ ಯಾವ ಎಸ್ಟಿಮೇಟ್‌ಗಳು ಸ್ಯಾಂಕ್ಷನ್ ಆಗಿದೆಯೆಂಬುದನ್ನು ತಿಳಿಸುವುದಕ್ಕೆ ಸಾಧ್ಯವೇ?

Sri K. HANUMANTHAIYA.—I will give the information to the Hon'ble Member later.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಗೂಳೂರಿಗೆ ಮುಕ್ಕಾಲು ಮೈಲಿ ದೂರದಲ್ಲಿ ಮೈದಾಳವೆಂಬ ಗ್ರಾಮ ವಿರುವುದು ತಮಗೆ ಗೊತ್ತಿದೆಯೇ?

ಶ್ರೀ ಕೆ. ಹನುಮಂತಯ್ಯ.—ಇರಬಹುದು.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಅಲ್ಲಿರತಕ್ಕ ಪುರಾತನ ದೇವಸ್ಥಾನಕ್ಕೆ ವಿದ್ಯುಚ್ಛಕ್ತಿಯನ್ನು ಕೊಡಬೇಕೆಂದು ಕೇಳುತ್ತಿರುವುದು ಸರ್ಕಾರದವರಿಗೆ ಗೊತ್ತಾಗಿದೆಯೇ?

Sri K. HANUMANTHAIYA.—These are all representations which will be borne in mind for implementation.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ತಾವು ಈ ಜಿಲ್ಲೆಗೆ ಒದಗಿಸಿರತಕ್ಕ 9 ಲಕ್ಷ ರೂಪಾಯಿನಲ್ಲಿ ಈ ಮೂರು ತಾಲ್ಲೂಕಿಗೂ ಹಣವನ್ನೊದಗಿಸದಿರಲು ಕಾರಣ ವೇನು?

ಶ್ರೀ ಕೆ. ಹನುಮಂತಯ್ಯ.—ಜಿಲ್ಲಾವಾರು ಅಂಕಿ ಅಂಶಗಳನ್ನು ಕೊಡಲಾಗಿದೆ. ತಾಲ್ಲೂಕುವಾರು ಅಂಕಿ ಅಂಶಗಳನ್ನು ಬೇಕಾದರೆ ಅನಂತರ ಕೊಡುತ್ತೇನೆ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ತಾಲ್ಲೂಕು ವಾರು ವಿವರಗಳನ್ನೊದಗಿಸಲು ತೊಂದರೆ ಏನು?

ಶ್ರೀ ಕೆ. ಹನುಮಂತಯ್ಯ.—ನಾನಾಗಲೇ ಹೇಳಿದೆ ತಮಗೆ ಬೇಕಾದರೆ ಅನಂತರ ತಿಳಿಸುತ್ತೇನೆ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಆ ಪೊಬಲಗಿನಲ್ಲಿ ಎಷ್ಟು ಖರ್ಚಾಗಿದೆ?

ಶ್ರೀ ಕೆ. ಹನುಮಂತಯ್ಯ.—ನೋಟೀಸ್.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—2 ಲಕ್ಷ 30 ಸಾವಿರ ರೂಪಾಯಿಗಳು ಖರ್ಚಾಗದಿರಲು ಕಾರಣ ವೇನು?

Mr. SPEAKER.—Till the end of June the progress will go on.

ಒಬ್ಬ ಸದಸ್ಯರು.—ನಾಗವಲ್ಲಯಿಲ್ಲಿ ಶ್ರೀ ಟಿ. ಕೆ. ಮೂಡಲಗಿರಿಗೌಡ ಎಂಬವರಿಗೆ ಪವರನ್ನು ಒದಗಿಸಲಾಗಿದೆ. ಅದೇನು ಈಗ ಈ ಪ್ರಶ್ನೆ ಹಾಕುತ್ತಿರುವ ಮಾನ್ಯ ಸದಸ್ಯರೋ ಯಾರು ಎಂಬುದು ಗೊತ್ತಾಗಲಿಲ್ಲವಲ್ಲ?

ಅಧ್ಯಕ್ಷರು.—ಅವರೇ ಬೇರೆ.

Laying out road from Byatha to Kakolu Tank.

Q.—424. Sri R. MUNISWAMIAH (Bangalore North — Scheduled Castes).—

Will the Government be pleased to state :—

(*a*) the progress of the laying out road from Byatha to Kakolu tank;

(*b*) the number of culverts required;

(*c*) the number of check drains required?

A.—Sri T. CHANNIAH (Minister for Public Health and Local Self-Government).—

(*a*) An estimate for Rs. 13,900 for the earthwork and metalling the road has been prepared. The work is to be taken up.

(*b*) Three.

(*c*) Check drains are to be provided along the upper margin of the road wherever necessary. This item is not usually specified in the estimate in numbers.

ಶ್ರೀ ಆರ್. ಮುನಿಸ್ವಾಮಯ್ಯ.—ಈ ರಸ್ತೆಯ ಕೆಲಸವನ್ನು ಯಾರು ಮಾಡಿಸುತ್ತಾರೆ?

Sri T. CHANNIAH.—The Director of Animal Husbandry Department.

ಶ್ರೀ ಆರ್. ಮುನಿಸ್ವಾಮಯ್ಯ.—ಅವರು ಈ ಕೆಲಸವನ್ನು ಇನ್ನು ಒಂದು ವರ್ಷ ಪ್ರಾರಂಭಮಾಡುವುದಕ್ಕಾಗುವುದಿಲ್ಲವೆಂದು ಜನರಿಗೆ ತಿಳಿಸಿರತಕ್ಕ ಅಂಶ ನಿಜವಾದುದೇ?

ಶ್ರೀ ಟಿ. ಚನ್ನಯ್ಯ.—ಅದನ್ನು ಜಾಗ್ರತೆಮಾಡ ಬೇಕೆಂದು ತಿಳಿಸಲಾಗುತ್ತದೆ.

ಶ್ರೀ ಕೆ. ಎ. ಬೈರೇಗೌಡ.—ಈ ರಸ್ತೆಯನ್ನು ಮಾನ್ಯ ಮುಖ್ಯಮಂತ್ರಿಗಳು ಮೂರು ದಿವಸಗಳಲ್ಲೇ ಮಾಡಿಸಿಕೊಡುತ್ತೇವೆಂಬ ಭರವಸೆ ಕೊಟ್ಟಿರಲಿಲ್ಲವೇ ?

Sri T. CHANNIAH.—I am not aware of it.

Repairs to road from Panayada Hundi in Chamarajanagar Taluk to Veeranapura via Heggothara.

Q.—476. Sri U. M. MADAPPA (Chamarajanagar).—

Will the Government be pleased to state :—

(*a*) whether the road from Panayada Hundi in Chamarajanagar Taluk to Veeranapura *via* Heggothara belongs to the District Board or to the Public Works Department;

(*b*) the reasons for this road lying without any repairs since a long time;

(*c*) whether measures would be taken to repair this immediately ?

A.—Sri T. CHANNIAH (Minister for Public Health and Local Self-Government).—

(*a*) and (*b*) It is a road formed under the Inter-village Communications Scheme. The District Board, Mysore, have sent a proposal to take it up for maintenance and it is under the consideration of Government.

(*c*) *Vide* reply to clauses (*a*) and (*b*).

ಶ್ರೀ ಯು. ಎಂ. ಮಾದಪ್ಪ.—ತಾವು (ಎ), (ಬಿ) ಪ್ರಶ್ನೆಗಳಿಗೆ ಒದಗಿಸಿರುವ ಉತ್ತರಕ್ಕನುಸಾರವಾಗಿ, ನಾವು ಜಿಲ್ಲಾ ಬೋರ್ಡಿನವರನ್ನು ವಿಚಾರಿಸಲಾಗಿ ಅವರು ಈ ರಸ್ತೆ ಮಾಡಿಸಲು ಸಾಧ್ಯವಿಲ್ಲವೆಂದು ತಿಳಿಸಿರತಕ್ಕ ಅಂಶ ಸರ್ಕಾರದವರ ಗಮನಕ್ಕೆ ಬಂದಿದೆಯೇ ?

Sri T. CHANNIAH.—I want notice.

ಶ್ರೀ ಯು. ಎಂ. ಮಾದಪ್ಪ.—ಈ ರಸ್ತೆ ಪ್ರಾರಂಭವಾದದ್ದು ಯಾವಾಗ ?

ಶ್ರೀ ಟಿ. ಚನ್ನಯ್ಯ.—ನೋಟೀಸ್.

ಶ್ರೀ ಯು. ಎಂ. ಮಾದಪ್ಪ.—ಬಹಳ ದಿವಸಗಳಿಂದ ಈ ರಸ್ತೆಗೆ ದುರಸ್ತಿ ಕೆಲಸ ನಡೆಸದೆ ಇರುವುದರಿಂದ ಇದನ್ನು ಬೇಗ ರಿಪೇರಿ ಮಾಡಿಸಲು ಏರ್ಪಾಟು ಮಾಡುತ್ತೀರಾ ?

ಶ್ರೀ ಟಿ. ಚನ್ನಯ್ಯ.—ಆಲೋಚನೆ ಮಾಡುತ್ತೇನೆ.

Payment of fee in hospitals by patients.

Q.—486. Sri SIDDIAH *alias* KUNNIAH (Gundlupet-Heggaddevankote—Scheduled Castes).—

Will the Government be pleased to state :—

(*a*) whether Government have prescribed any fee to be paid by the patients coming to hospitals;

(*b*) if so, the details thereof;

(*c*) whether the number of patients coming to hospitals has increased or decreased after levying this fee;

(*d*) their policy in levying such fee ?

A.—Sri T. CHANNIAH (Minister for Public Health and Local Self-Government).—

(*a*) Yes; but out-patients are treated free.

(*b*) A copy of Government Order No. M. 24445-48—Med. 68-52-8, dated 27th January 1953—3rd March 1953 is placed on the table.

(*c*) it is too early to say anything in the matter.

(*d*) Please see Government Order No. M. 24445-48—Med. 68-52-8, dated 27th January 1953—3rd March 1953.

ಶ್ರೀ ಸಿದ್ದಯ್ಯ ಉರುಫ್ ಕುನ್ನಯ್ಯ.—ಆಸ್ಪತ್ರೆಗೆ ಬರತಕ್ಕ ರೋಗಿಗಳಿಗೆ ಸುಂಕ ಕೊಡಬೇಕೆಂದು ಸರ್ಕಾರದವರು ನಿಗದಿ ಮಾಡಿದ್ದಾರೆಯೇ ?

ಶ್ರೀ ಟಿ. ಚನ್ನಯ್ಯ.—ತಾವು ಉತ್ತರ ನೋಡಿ. Out Patients ಗೆ ಫೀಜನ್ನು ವಜಾಮಾಡರಾಗಿದೆ. ಕೆಲವು ಸಂದರ್ಭಗಳಲ್ಲಿ ಫೀಜನ್ನು ಕೊಡಬೇಕೆಂದು ವಿಧಾಯಕ ಮಾಡರಾಗಿದೆ.

Financial aid to private medical institutions.

Q.—515. Sri G. PAPANNA (Sidlaghatta-Chikaballapur).—

Will the Government be pleased to state :—

(*a*) the financial aid given by Government to the various private Medical Institutions in the State during the last five years (the names of the institutions and the aid given to each to be given in detail);